M.V.C. ನಂ. 69-2019
ಪಿ.ಡಬ್ಲ್ಯೂ - 1

**ದಿನಾಂಕಃ 22-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಬಿ.ಎಂ.ಎಂ., ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಸದರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ಅರ್ಜಿಗೆ ಪೂರಕವಾಗಿ

1) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರ ಪ್ರ.ವ. ವರದಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-1 ಅಂತಾ ಗುರುತಿಸಲಾಯಿತು.
2) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರಲ್ಲಿಯ ದೂರಿನ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-2 ಅಂತಾ ಗುರುತಿಸಲಾಯಿತು.
3) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರಲ್ಲಿಯ ಅಪಘಾತ ಸ್ಥಳದ ಪಂಚನಾಮೆಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು.
4) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರಲ್ಲಿಯ ಗಾಯಾಳುವಿನ ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಯಿತು.
5) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರಲ್ಲಿಯ ಎಂ.ವಿ.ಐ., ವರದಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-5 ಅಂತಾ ಗುರುತಿಸಲಾಯಿತು.

6) ಗುತ್ತಲ ಪೋಲಿಸ ಠಾಣೆಯ ಅಪರಾಧ ಸಂಖ್ಯೆಃ 57/2013 ಇದರಲ್ಲಿಯ ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-6 ಅಂತಾ ಗುರುತಿಸಲಾಯಿತು.

7) 1 ನೇ ಎದುರುದಾರನ ವಾಹನದ ವಿಮಾ ಪಾಲಸಿಯ ಜೆರಾಕ್ಸ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ಸಾಬೀತುಪಡಿಸುವ ಹೊಣೆಗಾರಿಕೆಯೊಂದಿಗೆ ನಿಪಿ-7 ಎಂದು ಗುರುತಿಸಲಾಯಿತು.

8) ಅರ್ಜಿದಾರಳ ಹಾಗೂ ಅವಳ ತಾಯಿಯ ಆಧಾರ ಕಾರ್ಡನ ಜೆರಾಕ್ಸ ಪ್ರತಿಯನ್ನು ಹಾಜರಪಡಿಸಿದ್ದು ಅವುಗಳನ್ನು ಸಾಬೀತುಪಡಿಸುವ ಹೊಣೆಗಾರಿಕೆಯೊಂದಿಗೆ ನಿಪಿ-8 ಮತ್ತು ನಿಪಿ-9 ಅಂತಾ ಗುರುತಿಸಲಾಯಿತು.

9) ಅರ್ಜಿದಾರಳ ಡಿಸ್‌ಚಾರ್ಜ ಸಮರಿ ಹಾಜರಪಡಿಸಿದ್ದು ಅದನ್ನು ನಿಪಿ-10 ಅಂತಾ ಗುರುತಿಸಲಾಯಿತು.

10) ಅರ್ಜಿದಾರಳ ಪ್ರೊವೀಜನಲ್ ಡಿಸ್‌ಚಾರ್ಜ ಕಾರ್ಡನ್ನು ಹಾಜರಪಡಿಸಿದ್ದು ಅದನ್ನು ನಿಪಿ-11 ಅಂತಾ ಗುರುತಿಸಲಾಯಿತು.

11) ಅರ್ಜಿದಾರಳ ಆಸ್ಪತ್ರೆಯ ಬಿಲ್‌ಗಳನ್ನು ಹಾಜರಪಡಿಸಿದ್ದು ಅದನ್ನು ನಿಪಿ-12 ಅಂತಾ ಗುರುತಿಸಲಾಯಿತು.

12) 2 ಓಪಿಡಿ ರಸೀದಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಪಿ-13 ಮತ್ತು ನಿಪಿ-14 ಅಂತಾ ಗುರುತಿಸಲಾಯಿತು.

13) ಒಟ್ಟು 7 ಮೆಡಿಕಲ್ ಬಿಲ್‌ಗಳನ್ನು ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-15 ಅಂತಾ ಗುರುತಿಸಲಾಯಿತು.

14) ಕೃಪಾನಂದ ಡೈಗ್ನೋಸ್ಟಿಕ್ಸ ಸೆಂಟರ್ ಇವರ ಎರಡು ಚೀಟಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಪಿ-16 ಮತ್ತು ನಿಪಿ-17 ಅಂತಾ ಗುರುತಿಸಲಾಯಿತು.

15) ವಿಶ್ವಾಸ ಹೈಟೆಕ್ ಡೈಗ್ನೊಸ್ಟೀಕ್ಸ ಸೆಂಟರ್ ಇವರು ನೀಡಿದ ವರದಿ ಹಾಜರಪಡಿಸಿದ್ದು ಅದನ್ನು ನಿಪಿ-18 ಅಂತಾ ಗುರುತಿಸಲಾಯಿತು.

16) ಸೌಖ್ಯದಾ ಆಸ್ಪತ್ರೆಯವರು ನೀಡಿದ ಔಷಧಗಳ ಚೀಟಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-19 ಅಂತಾ ಗುರುತಿಸಲಾಯಿತು.

17) ಸೌಖ್ಯದಾ ಆಸ್ಪತ್ರೆಯವರು ನೀಡಿದ ಓ.ಟಿ.ಚಾರ್ಜಶೀಟ್ ಹಾಜರಪಡಿಸಿದ್ದು ಅದನ್ನು ನಿಪಿ-20 ಅಂತಾ ಗುರುತಿಸಲಾಯಿತು.

18) 02 ಕ್ಷ-ಕಿರಣಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಪಿ-21 ಮತ್ತು ನಿಪಿ-22 ಅಂತಾ ಗುರುತಿಸಲಾಯಿತು.

ಕಾರಣ ಅರ್ಜಿಯಲ್ಲಿ ಕೋರಿದಂತೆ ಪರಿಹಾರವನ್ನು ಒದಗಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಂ.ಬಿ.ಎನ್. 1 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ಪಡಿಸಿದ ವಾಹನದ ಚಾಲಕನಿಗೆ ವಾಹನ ಪರವಾನಿಗೆ ಪತ್ರ ಹಾಗೂ ವಾಹನಕ್ಕೆ ವಿಮೆ ಕೂಡಾ ಇತ್ತು. ಸಾಕ್ಷಿಗೆ ವಾಹನದ ಆರ್.ಸಿ. ಹಾಗೂ ಚಾಲನಾ ಪರವಾನಿಗೆ ಪತ್ರದ ಜೆರಾಕ್ಸ ಪ್ರತಿ ತೋರಿಸಲಾಗಿ ಅದನ್ನು ಸಾಕ್ಷಿ ಒಪ್ಪಿದ್ದರಿಂದ, ಅವುಗಳನ್ನು ನಿಆರ್-1 ಮತ್ತು ನಿಆರ್-2 ಅಂತಾ ಗುರುತಿಸಲಾಯಿತು. ಸದರಿ ಅಪಘಾತದ ಪರಿಹಾರದ ಹಣ ನೀಡಲು 1 ನೇ ಎದುರುದಾರ ಬಾಧ್ಯಸ್ಥನಿರುವುದಿಲ್ಲ ಅಂದರೆ ಸುಳ್ಳು.

**ಪಾಟೀ ಸವಾಲುಃ ಶ್ರೀ ಎ.ಎಸ್.ಪಿ., 2 ನೇ ಎದುರುದಾರರ ಪರ ವಕೀಲರಿಂದಃ**

**1.** ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲ ದಾಖಲೆಗಳು ಸರಿಯಾಗಿ ಇರುತ್ತವೆ. ಈಗ ಅರ್ಜಿದಾರಳ ವಯಸ್ಸು 20 ವರ್ಷ ಆಗಿರುತ್ತದೆ. ಸದರಿ ಅಪಘಾತ ನಡೆದಾಗ ಅರ್ಜಿದಾರಳಿಗೆ 13 ರಿಂದ 14 ವರ್ಷ ವಯಸ್ಸು ಆಗಿರಬಹುದು. ಅಪಘಾತ ನಡೆಯುವ ಮೊದಲು ಅರ್ಜಿದಾರಳು 6 ನೇ ತರಗತಿಯಲ್ಲಿ ಓದುತ್ತಿದ್ದಳು, ಈಗ ಅವಳು ಶಾಲೆಗೆ ಹೋಗುತ್ತಿಲ್ಲ. ಅರ್ಜಿದಾರಳು 1 ರಿಂದ 6 ನೇ ತರಗತಿಯವರೆಗೆ ಶಾಲೆಗೆ ಹಾಜರಾಗಿರುತ್ತಾಳೆ.

**2.** ಅರ್ಜಿದಾರಳು ಊಟ ಮಾಡಿ ಬಹಿರದೇಸೆಗೆ ಹೋಗಿ ಬರುವಾಗ ವಾಹನ ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ. ಅಪಘಾತ ನಡೆದ 5 ದಿನಗಳ ನಂತರ ಈ ಬಗ್ಗೆ

ದೂರನ್ನು ನೀಡಿರುತ್ತೇವೆ. ಅಪಘಾತ ನಡೆದ ನಂತರ ತಕ್ಷಣ ದೂರು ನೀಡಲು ತೊಂದರೆ ಇತ್ತು. ಅಪಘಾತ ನಡೆಸಿದ ವಾಹನದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಹೀಗಾಗಿ 5 ದಿನಗಳ ಬಳಿಕ ಪರಿಹಾರದ ಹಣ ಬರಲಿ ಅಂತಾ ಪೋಲಿಸರೊಂದಿಗೆ ಶಾಮೀಲಾಗಿ ಬೇರೆ ವಾಹನವನ್ನು ಈ ಪ್ರಕರಣದಲ್ಲಿ ನೀಡಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನದ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಅಂದರೆ ಸುಳ್ಳು.

**3.** ಅಪಘಾತ ನಡೆದ ನಂತರ ಅರ್ಜಿದಾರಳನ್ನು ಮೊದಲು ಗುತ್ತಲ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದ್ದೆವು, ಅಲ್ಲಿಂದ ಹಾವೇರಿಯ ಹಂದ್ರಾಳ ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದೇವೂ ಹಾಗೂ ಆ ನಂತರ ಅರ್ಜಿದಾರಳನ್ನು ದಾವಣಗೆರೆಯ ಸೌಖ್ಯದಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದೆವು. ಗುತ್ತಲದಲ್ಲಿ ಅರ್ಜಿದಾರಳನ್ನು ಪರೀಕ್ಷೆ ಮಾಡಿರುತ್ತಾರೆ ಅಂದರೆ ಸರಿ. ಹಂದ್ರಾಳ ಆಸ್ಪತ್ರೆ ಹಾಗೂ ಸೌಖ್ಯದಾ ಆಸ್ಪತ್ರೆಯವರು ನೀಡಿದ ಎಂ.ಎಲ್.ಸಿ., ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ಅರ್ಜಿದಾರಳಿಗೆ ಯಾವುದು ಗಾಯವಾಗಿಲ್ಲ, ಹೀಗಾಗಿ ಹಾವೇರಿ ಹಾಗೂ ದಾವಣಗೆರೆ ಆಸ್ಪತ್ರೆಯವರು ಎಂ.ಎಲ್.ಸಿ., ವರದಿ ನೀಡಿಲ್ಲ ಅಂದರೆ ಸುಳ್ಳು. ನನ್ನ ಮಗಳು ಶಾಲೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿ ಇದ್ದಳೂ ಅಂತಾ ತೋರಿಸುವ ಕುರಿತು ದಾಖಲೆ ಹಾಜರಪಡಿಸಿಲ್ಲ. ಸದರಿ ಅಪಘಾತದಲ್ಲಿ ಅರ್ಜಿದಾರಳು ಯಾವುದೇ ಅಂಗನ್ಯೂನ್ಯತೆ ಹೊಂದಿಲ್ಲ, ಅವಳು ತನ್ನ ಶಿಕ್ಷಣವನ್ನು ತೊಂದರೆ ಇಲ್ಲದೇ ಮುಂದುವರಿಸಿರುತ್ತಾಳೆ ಅಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಅರ್ಜಿದಾರಳಿಗೆ ಭುಜಕ್ಕೆ ಹಾಗೂ ಕಾಲಿಗೆ ಪೆಟ್ಟಾಗಿರುತ್ತದೆ. ಅರ್ಜಿದಾರಳು ಅಪಘಾತದಿಂದ ಆದ ಗಾಯಕ್ಕಾಗಿ ಶಾಲೆಗೆ ಹೋಗುವುದನ್ನು ಬಿಟ್ಟಿಲ್ಲ ಅವಳು ತನ್ನ ಶಿಕ್ಷಣವನ್ನು ಮುಂದುವರಿಸಿದರೂ ಕೂಡಾ ಇಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**4.** ಸದರಿ ಅಪಘಾತಪಡಿಸಿದ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಅಂದರೆ ಸುಳ್ಳು ಅದೇ ರೀತಿ ವಾಹನಕ್ಕೆ ಪರ್ಮಿಟ್ ಸಹ ಇರಲಿಲ್ಲ ಅಂದರೆ ಸುಳ್ಳು. ಅದೇ ರೀತಿ ಪರಿಹಾರದ ಹಣವನ್ನು ಪಡೆಯುವ ಕುರಿತು ಬೇರೆ ವಾಹನವನ್ನು ಈ ಪ್ರಕರಣದಲ್ಲಿ ಸಿಲುಕಿಸಿ 5 ದಿನ ತಡ ಮಾಡಿ ದೂರನ್ನು ನೀಡಿದ್ದರಿಂದ ವಿಮಾ ಕಂಪನಿಯು ಪರಿಹಾರ ನೀಡುವ ಬಾಧ್ಯಸ್ಥಿಕೆ ಹೊಂದಿಲ್ಲ ಅಂದರೆ ಸುಳ್ಳು. ಅರ್ಜಿದಾರಳಿಗೆ ಸಂಬಂಧಿಸಿದಂತೆ ಆಸ್ಪತ್ರೆಯ ಚೀಟಿ ಹಾಗೂ ರಸೀದಿಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗಲಿ ಅಂತಾ ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಹಿ**- 22-8-2023.**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

M.V.C. ನಂ. 69-2019
ಪಿ.ಡಬ್ಲ್ಯೂ - 1